ಶ್ರೀ ಕಾಗೋಡು ತಿಮ್ಮಪ್ಪ.—ಈ ರೀತಿ ಇಂತಹ ದೊಡ್ಡ ಕಂಪನಿಗೆ ದೊಡ್ಡ ಪ್ರಮಾಣದಲ್ಲಿ ವ್ಯವಹಾರ ಆಗುವುದನ್ನು ನಿರ್ಧಾರ ಮಾಡುವಾಗ, ಪ್ರತಿ ವರ್ಷ ಇಷ್ಟು ಕೊಡಬೇಕು ಎಂದು ನಿರ್ಧಾರ ಮಾಡಿಕೊಳ್ಳದೆ ಮತ್ತು ಯಾವ ದರದಲ್ಲಿ ಕೊಡಬೇಕು ಎಂದೂ ನಿರ್ಧಾರ ಮಾಡಿಕೊಳ್ಳದೆ ಕೊಟ್ಟಿರುವುದರಿಂದ ಸರ್ಕಾರಕ್ಕೆ ಲುಕ್ಸಾನು ಆಗುವುದಿಲ್ಲವೇ?

ಶ್ರೀ ಸಿ. ಎನ್. ಪಾಟೀಲ್.—ಲೇಟೆಸ್ಟ್ ಅಗ್ರಿಮೆಂಟ್‌ನಲ್ಲಿ ರೇಟ್ಸ್ ಕವರ್ ಮಾಡಿದೆ. ಎರಡು ವರೈಟಿ ಸಾಫ್ಟ್ ವುಡ್ ಮರಗಳನ್ನು ಕೊಟ್ಟಿದೆ. ತಾವು ಕಳೆದ ೫ ವರ್ಷದಲ್ಲಿ ಎಷ್ಟಾಯಿತು ಎಂದು ಕೇಳಿದ್ದೀರಿ. ೧೯೭೧-೭೨ ರಲ್ಲಿ ೨೩,೨೫೭ ಕ್ಯೂಬಿಕ್ ಮೀಟರ್ ಮರ ಪಡೆದುಕೊಂಡಿದ್ದಾರೆ, ಅದರ ಬೆಲೆ ೧೦ ಲಕ್ಷ, ೫೨ ಸಾವಿರ ೧೧ ರೂಪಾಯಿಗಳು. ೧೯೭೧-೭೨ ರಲ್ಲಿ ೧೯೮೧೦ ಕ್ಯೂಬಿಕ್ ಮೀಟರ್ ಮರ ಡ್ರಾ ಮಾಡಿದರೆ ಅದರ ಬೆಲೆ ೧೦ ಲಕ್ಷದ ೭೭ ಸಾವಿರದ ೩೪೭ ರೂಪಾಯಿಗಳು. ೧೯೭೨-೭೩ ರಲ್ಲಿ ೧೮,೪೯೭ ಘನ ಮೀಟರ್ ಡ್ರಾ ಮಾಡಿದ್ದಾರೆ, ಅದರ ಬೆಲೆ ೧೦ ಲಕ್ಷದ ೩೦೪ ರೂಪಾಯಿಗಳು ೧೯೭೩-೭೪ ರಲ್ಲಿ ೨೨,೬೯೮ ಘನ ಮೀಟರ್ ಡ್ರಾ ಮಾಡಿದ್ದಾರೆ ಅದರ ಬೆಲೆ ೧೩ ಲಕ್ಷದ ೭೨ ಸಾವಿರದ ೧೧೪ ರೂಪಾಯಿಗಳು. ೧೯೭೪-೭೫ ರಲ್ಲಿ ೨೨,೬೨೪ ಕ್ಯೂಬಿಕ್ ಮೀಟರ್ ಡ್ರಾ ಮಾಡಿದ್ದಾರೆ ಅದರ ಬೆಲೆ ೧೪ ಲಕ್ಷದ ೩೯ ಸಾವಿರದ ೫೮೦ ರೂಪಾಯಿಗಳು. ಇದು ಕಳೆದ ೫ ವರ್ಷದ್ದು.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಆ ಕಂಪೆನಿಗೆ ಅಗ್ರಿಮೆಂಟ್ ಮಾಡಿದ್ದರಲ್ಲ, ಇದರಿಂದ ಸರ್ಕಾರಕ್ಕೆ ಸಾಕಷ್ಟು ಲುಕ್ಸಾನು ಆಗುತ್ತಾ ಇದೆ ಎಂದು ತಮಗೆ ಗೊತ್ತಿದ್ದರೂ ಕೂಡ ಮಾಡಿದ್ದೀರಿ ಮತ್ತು ೫ ವರ್ಷಕ್ಕಾದರೂ ಮಾಡಬೇಕಲ್ಲವೇ ೧೯೭೭ ನೇ ಇಸವಿವರೆಗೆ ಅಗ್ರಿಮೆಂಟ್ ಮಾಡಿರುವುದು ಸರ್ಕಾರದ ಆದಾಯದ ದೃಷ್ಟಿಯಿಂದ ಅನ್ಯಾಯವಲ್ಲವೇ ಸ್ವಾಮಿ?

ಶ್ರೀ ಸಿ. ಎನ್. ಪಾಟೀಲ್.—ಅರಣ್ಯ ಪ್ರದೇಶದ ರಾ ಮೆಟೀರಿಯಲ್ ಅನ್ನು ಎಲ್ಲಾ ಕಂಪನಿಗಳಿಗೂ ಸರಬರಾಯಿ ಮಾಡುತ್ತಿದ್ದೇವೆ. ಕೆಲವು ಕಂಪನಿಗಳವರು ಲಾಂಗ್ ಲೀಸ್ ಮಾಡಿಕೊಂಡಿದ್ದಾರೆ. ಇದನ್ನು ನ್ಯಾಷನಲೈಸ್ ಮಾಡುವುದಕ್ಕೆ ಸಾಧ್ಯವೇ ಎನ್ನುವುದರ ಬಗ್ಗೆ ಪರಿಶೀಲನೆ ಮಾಡಬೇಕು ಮತ್ತು ಇದರ ಬಗ್ಗೆ ಯೋಗ್ಯ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ಮರಗಳಿಂದ ದಿಮ್ಮಿಗಳಿಂದ ಲಾಗ್ಸ್ ತೆಗೆಯುತ್ತಾರೆ. ಅದರಲ್ಲಿ ಉಳಿದಿರತಕ್ಕ ಲಾಪ್ಸ್ ಮತ್ತು ಟಾಪ್ಸ್ ಅನ್ನು ಯಾರು ಪಡೆಯಬೇಕು ಎನ್ನುವುದರ ಬಗ್ಗೆ ಹೊಸದಾಗಿ ಮಾಡಿಕೊಂಡಿರತಕ್ಕ ಅಗ್ರಿಮೆಂಟಿನಲ್ಲಿ ಯಾವ ನಿಭಂದನೆಯೂ ಇಲ್ಲ. ಇದನ್ನು ಯಾರು ತೆಗೆದುಕೊಂಡು ಹೋಗಬೇಕು ಮತ್ತು ಇದಕ್ಕೆ ಯಾರು ಜವಾಬ್ದಾರರು ?

ಶ್ರೀ ಸಿ ಎನ್. ಪಾಟೀಲ್.—ಈಗ ಎರಡು ವರ್ಷಗಳಿಂದ ವಿಮ್‌ಕೋ ಫ್ಯಾಕ್ಟರಿಯವರಿಗೆ ಲಾಪ್ಸ್ ಮತ್ತು ಟಾಪ್ಸ್ ಅನ್ನು ರೋಡ್ ಪಕ್ಕಕ್ಕೆ ಗುಡ್ಡೆ ಹಾಕಿ ಕೊಡಬೇಕು ಎನ್ನುವ ನಿಭಂದನೆಯನ್ನು ಹಾಕುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದು ಅಗ್ರಿಮೆಂಟಿನಲ್ಲಿ ಕಾಂಟೆಂಪ್ಲೇಟ್ ಆಗಿಲ್ಲ.

ಶ್ರೀ ಸಿ. ಎನ್. ಪಾಟೀಲ್.—ಅದನ್ನು ನಾನೂ ಒಪ್ಪುತ್ತೇನೆ. ವಿಮ್ಕೋ ಫ್ಯಾಕ್ಟರಿಯವರು ಸುಮಾರು ೧೯೨೧ ಕ್ಯೂಬಿಕ್ ಮೀಟರ್ ಮರವನ್ನು ರೋಡ್ ಸೈಡಿಗೆ ತಂದು ಕೊಟ್ಟಿದ್ದಾರೆ. ಇದನ್ನು ನಾವು ಸ್ಕೂಲ್ ಸ್ಕೇಲ್ ಇಂಡಸ್ಟ್ರೀಸ್ ಅವರಿಗೆ ಪ್ಯಾಕಿಂಗ್ ಕೇಸ್ ಮಾಡುವುದಕ್ಕೋಸ್ಕರ ಒಂದು ಕ್ಯೂಬಿಕ್ ಮೀಟರ್‌ಗೆ ರೂ. ೧೭-೫೦ ಪೈಸೆಯಂತೆ ಕೊಡುತ್ತಿದ್ದೇವೆ.

ಅಧ್ಯಕ್ಷರು : —ಪ್ರಶ್ನೆ ನಂಬರ್ಸ್ ೩೩೮, ೪೫೬ ಮತ್ತು ೫೦೯ ಒಂದೇ ರೀತಿಯಿರುವುದರಿಂದ ಈ ಪ್ರಶ್ನೆಗಳನ್ನು ಒಟ್ಟಿಗೆ ಕೇಳಬಹುದು.

Old Age Pension

338. C. NAGAMMA KESHAVAMURTHY (Davanagere) :—Will the Minister for Finance and Housing be pleased to state :—

(*a*) the number of old age pensions sanctioned in the State (Districtwise figures may be given) ;

(*b*) the number of old age pensions sanctioned in each taluk of Chitradurga District ;

(*c*) the number of application that are pending in Davangere taluk ;

(*d*) the number of applications received in Davanagere taluk and the number of applications for the last six months (monthly figures may be given) ?

SRI M. Y. GHORPADE (Minister for Finance and Housing) :—

(*a*) Districtwise figures regarding the old age pension sanctioned in the State are furnished in the statement appended.

(*b*) The number of old age pensions sanctioned in each taluk of Chitradurga District is indicated as below :—

(1)	Chitradurga taluk	...	1,278
(2)	Challakere taluk	...	420
(3)	Davanagere taluk	...	1,300
(4)	Harihar taluk	...	91
(5)	Hiriyur taluk	...	885
(6)	Holalkere taluk	...	987
(7)	Hosadurga taluk	...	502
(8)	Jagalur taluk	...	928
(9)	Molakalmur taluk	...	311

(*c*) 287 cases are pending in Davanagere taluk.

(*d*) As reported by the Deputy Commissioner, Chitadurga, 2,476 applications have been received in Davanagere taluk from the inception of the scheme. The number of applications received for the last six months is noted below :

(1)	July 1975	...	11
(2)	August 1975	...	55
(3)	September 1975	...	31
(4)	October 1975	...	54
(5)	November 1975	...	66
(6)	December 1975	...	92

STATEMENT

Figures of old age pension cases as on 31st December 1975 in the State.

(*Districtwise Figures*)

Sl. No.	Name of the Districts		Number
1.	Bangalore	...	9,378
2.	Bellary	...	3 613
3.	Belgaum	...	2,714
4.	Bijapur	...	4,048
5.	Bidar	...	957
6.	Chitradurga	...	6 702
7.	Chickmagalur	...	2,207
8.	Coorg	...	987
9.	Dharwar	...	4,542
10.	Gulbarga	...	8 246
11.	Hassan	...	4,527
12.	Kolar	...	6,670
13.	Karwar	...	4,564
14.	Mysore	...	12,554
15.	Mandya	...	3,302
16.	Mangalore	...	5,972
17.	Raichur	...	4,820
18.	Shimoga	...	2,996
19.	Tumkur	...	4,269
		Total ...	93,068

ಚಿಂತಾಮಣಿ ತಾಲೂಕಿನಲ್ಲಿ ಮಂಜೂರ್ಮಾಡಿದ ವೃದ್ಧಾಪ್ಯವೇತನ

೪೫೬. ಶ್ರೀ ಚೌಡರೆಡ್ಡಿ (ಚಿಂತಾಮಣಿ).—ಹಣಕಾಸು ಹಾಗೂ ವಸತಿ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ೧೯೭೪-೧೯೭೫ರಲ್ಲಿ ಚಿಂತಾಮಣಿ ತಾಲೂಕಿನಲ್ಲಿ ಎಷ್ಟು ವೃದ್ಧಾಪ್ಯ ವೇತನದ ಅರ್ಜಿಗಳು ಬಂದಿವೆ ;

(ಆ) ಇವುಗಳ ಪೈಕಿ ಮಂಜೂರಾಗದೆ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು ;

(ಇ) ರಾಜ್ಯದಲ್ಲಿ ಇದುವರೆಗೆ ಎಷ್ಟು ವೃದ್ಧಾಪ್ಯ ವೇತನಗಳನ್ನು ಮಂಜೂರು ಮಾಡಲಾಗಿದೆ ಜಿಲ್ಲಾವಾರು ಮತ್ತು ತಾಲೂಕುವಾರು ವಿವರ ಕೊಡಬೇಕು) ?

(